ಅನುಚ್ಛೇದ 36 - 42

# ರಾಜ್ಯ ನಿರ್ದೇಶಕ ತತ್ವಗಳು

ಭಾಗ 01

## ಉಚಿತ ಕಾನೂನು ನೆರವು

ಆರ್ಥಿಕ ಮತ್ತು ಸಾಮಾಜಿಕ ಕಾರಣದಿಂದಾಗಿ ವಕೀಲರನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗದಿದ್ದಾಗ ಸರ್ಕಾರವು ಉಚಿತವಾಗಿ ವಕೀಲರ ಸೇವೆಯನ್ನು ಒದಗಿಸಬೇಕು.

## ಸಂಪತ್ತುಗಳ ಒಡೆತನ

ಸರ್ಕಾರವು ಸಮುದಾಯದ ಸಂಪತ್ತುಗಳ ಒಡೆತನ ಮತ್ತು ನಿಯಂತ್ರಣ ಸಾರ್ವಜನಿಕ ಹಿತಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳಬೇಕು.

## ಆರ್ಥಿಕ ವ್ಯವಸ್ಥೆ

ಸರಕಾರವು ಯಾರ ಹಿತಕ್ಕೂ ಧಕ್ಕೆಯಾಗದ ಹಾಗೆ ಸಂಪತ್ತು, ಭೂಮಿ, ಬಂಡವಾಳ ಮತ್ತು ಶ್ರಮಶಕ್ತಿ ಮುಂತಾದವು ಕೇಂದ್ರೀಕೃತವಾಗದಂತೆ ಆರ್ಥಿಕ ವ್ಯವಸ್ಥೆಯನ್ನು ರಚಿಸಬೇಕು.

## ಸಮಾನ ವೇತನ

ಪುರುಷ ಮತ್ತು ಮಹಿಳೆ ಇಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವಂತೆ ನಿಯಮಗಳನ್ನು ಸರ್ಕಾರ ಜಾರಿಗೊಳಿಸಬೇಕು.

## ಗ್ರಾಮ ಪಂಚಾಯತಿ

ರಾಜ್ಯವು ಗ್ರಾಮ ಪಂಚಾಯಿತಿಗಳನ್ನು ಸಂಘಟಿಸಿ, ಅವುಗಳು ಸ್ವಯಂ ಆಡಳಿತ ಘಟಕಗಳಾಗಿ ಕೆಲಸ ಮಾಡಲು ಬೇಕಾದ ಅಧಿಕಾರವನ್ನು ಕೊಡುವುದು.

## ಕೆಲಸದ ಹಕ್ಕು

ಸರ್ಕಾರವು, ತನ್ನ ಆರ್ಥಿಕ ಮಿತಿಯೊಳಗೆ ಕೆಲಸ ಮಾಡುವ, ಶಿಕ್ಷಣ ಪಡೆಯುವ ಹಕ್ಕನ್ನು ಹಾಗು ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಮತ್ತು ಇತರೆ ಕಷ್ಟದ ಸಂದರ್ಭಗಳಲ್ಲಿ ಸಾರ್ವಜನಿಕ ಸಹಾಯವನ್ನು ಪಡೆಯುವ ಹಕ್ಕನ್ನು ಖಾತರಿ ಪಡಿಸಬೇಕು.

## ಉತ್ತಮ ವಾತಾವರಣ

ಕೆಲಸದ ಸ್ಥಳದಲ್ಲಿ ನ್ಯಾಯಯುತ ಹಾಗು ಉತ್ತಮ ವಾತಾವರಣ ಇರುವಂತೆ, ಮಹಿಳಾ ಉದ್ಯೋಗಿಗಳಿಗೆ ಹೆರಿಗೆ ಸೌಲಭ್ಯಗಳು ಇರುವಂತೆ ಸರ್ಕಾರ ನೋಡಿಕೊಳ್ಳಬೇಕು.

**ಭಾರತ ಸಂವಿಧಾನ**

**ಇಲ್ಲಿ ರಾಜ್ಯ ನೀತಿಯ ನಿರ್ದೇಶಕ ತತ್ವಗಳನ್ನು ಸರಳೀಕೃತಗೊಳಿಸಲಾಗಿದೆ. ಸಂಪೂರ್ಣ ಅನುಚ್ಛೇದಗಳಿಗೆ ದಯವಿಟ್ಟು ಭಾರತದ ಸಂವಿಧಾನವನ್ನು ಉಲ್ಲೇಖಿಸಿ.**

lawyering for change

अनुच्छेद 43 - 51

ಅನುಚ್ಛೇದ 43 - 51

# ರಾಜ್ಯ ನಿರ್ದೇಶಕ ತತ್ವಗಳು

ಭಾಗ 02

## ಬದುಕುವ ವೇತನ

ಎಲ್ಲಾ ಕಾರ್ಮಿಕರಿಗೂ ಬದುಕುವ ವೇತನ ಹಾಗು ಉತ್ತಮ ಜೀವನ ನಿರ್ವಹಣೆ, ಬಿಡುವಿನ ಸಮಯ ಹಾಗು ಸಾಮಾಜಿಕ, ಸಾಂಸ್ಕೃತಿಕ ಭಾಗವಹಿಸಿಕೆಗೆ ಅವಕಾಶಗಳು ದೊರೆಯುವಂತಹ ಕೆಲಸದ ವಾತಾವರಣ ಸೃಷ್ಟಿಸಲು ಕ್ರಮ ತೆಗೆದುಕೊಳ್ಳಬೇಕು .

## ಮಕ್ಕಳ ಆರೈಕೆ

ಮಕ್ಕಳಿಗೆ ಆರು ವರ್ಷದ ತನಕ ಅವರ ಪಾಲನೆಗೆ ಮತ್ತು ಅವರಿಗೆ ಶಿಕ್ಷಣ ಸಿಗುವಂತೆ ಸರ್ಕಾರ ಶ್ರಮ ವಹಿಸಬೇಕು.

## ಕಾರ್ಮಿಕರ ಭಾಗವಹಿಸುವಿಕೆ

ಕಾನೂನು ಅಥವಾ ಇತರ ವಿಧಾನಗಳ ಮೂಲಕ, ಉದ್ಯಮಗಳು ಹಾಗು ಕೈಗಾರಿಕೆಗಳ ನಿರ್ವಹಣೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು

## ಪರಿಶಿಷ್ಟ ಜಾತಿ ಹಾಗು ಪಂಗಡಗಳ ಕಲ್ಯಾಣ

ಸಮಾಜದ ದುರ್ಬಲ ವರ್ಗಗಳ, ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಹಾಗೂ ಆರ್ಥಿಕ ಸಬಲೀಕರಣಕ್ಕಾಗಿ ವಿಶೇಷ ಕಾಳಜಿಯಿಂದ ಕೆಲಸ ಮಾಡಬೇಕು ಜೊತೆಗೆ ಅವರನ್ನು ಅನ್ಯಾಯ ಮತ್ತು ಶೋಷಣೆಯಿಂದ ರಕ್ಷಿಸಬೇಕು.

## ಸಹಕಾರ ಸಂಘಗಳು

ಸಹಕಾರ ಸಂಘಗಳ ರಚನೆ, ಸ್ವಾಯತ್ತತೆ ಮತ್ತು ಪ್ರಜಾಸತ್ತಾತ್ಮಕ ನಿರ್ವಹಣೆಯನ್ನು ಉತ್ತೇಜಿಸಲು ಕ್ರಮ ತೆಗೆದುಕೊಳ್ಳಬೇಕು

## ಸಾರ್ವಜನಿಕ ಆರೋಗ್ಯ

ದೇಶದ ಜನತೆಯ ಪೌಷ್ಟಿಕತೆಯನ್ನು ಹೆಚ್ಚಿಸುವುದು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸಬಲೀಕರಿಸುವುದು ಮತ್ತು ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು - ಇವುಗಳು ಸರ್ಕಾರದ ಪ್ರಮುಖ ಜವಾಬ್ದಾರಿಗಳು.

## ಪರಿಸರ ಸಂರಕ್ಷಣೆ

ದೇಶದ ಪರಿಸರವನ್ನು ಸಂರಕ್ಷಿಸಲು ಮತ್ತು ಸುಧಾರಿಸಲು ಹಾಗೂ ಅರಣ್ಯಗಳನ್ನು ಮತ್ತು ವನ್ಯಜೀವಿಗಳನ್ನು ರಕ್ಷಿಸಲು ರಾಜ್ಯವು ಪ್ರಯತ್ನಿಸತಕ್ಕದ್ದು.

ಭಾರತ ಸಂವಿಧಾನ

**ಇಲ್ಲಿ ರಾಜ್ಯ ನೀತಿಯ ನಿರ್ದೇಶಕ ತತ್ವಗಳನ್ನು ಸರಳೀಕೃತಗೊಳಿಸಲಾಗಿದೆ. ಸಂಪೂರ್ಣ ಅನುಚ್ಛೇದಗಳಿಗೆ ದಯವಿಟ್ಟು ಭಾರತದ ಸಂವಿಧಾನವನ್ನು ಉಲ್ಲೇಖಿಸಿ.**

lawyering for change